ಗ್ರಾಮಪಂಚಾಯಿತಿಗಳಿಗೆ ಅನುದಾನ ಬಿಡುಗಡೆ.

307 (633) ಶ್ರೀ ಅರಗ ಜ್ಞಾನೇಂದ್ರ (ತೀರ್ಥಹಳ್ಳಿ):

ಮಾನ್ಯ ಗ್ರಾಮೀಣಾಭಿವೃದ್ಧಿ ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

(ಅ) ಗ್ರಾಮ ಪಂಚಾಯತಿಗಳಿಗೆ ಸರ್ಕಾರದಿಂದ ಕೊಡುವ ವಾರ್ಷಿಕ ಅನುದಾನವೆಷ್ಟು;

(ಆ) ಇದನ್ನು ಎಷ್ಟು ಕಂತುಗಳಲ್ಲಿ ಬಿಡುಗಡೆ ಮಾಡಲಾಗುತ್ತದೆ;

(ಇ) ಶಿವಮೊಗ್ಗ ಜಿಲ್ಲೆಯ ತೀರ್ಥಹಳ್ಳಿ ತಾಲ್ಲೂಕಿನ ವಿವಿಧ ಗ್ರಾಮ ಪಂಚಾಯತಿಗಳಿಗೆ ಈಗಾಗಲೇ ಬಿಡುಗಡೆ ಆಗಿರುವ ಅನುದಾನ ಎಷ್ಟು;

(ಈ) ಅನುದಾನ ಬಿಡುಗಡೆ ವಿಳಂಬದಿಂದಾಗಿ ತೀರ್ಥಹಳ್ಳಿ ತಾಲ್ಲೂಕಿನ ಗ್ರಾಮ ಪಂಚಾಯತಿಗಳಲ್ಲಿ ಕಾಮಗಾರಿಗಳು ಕುಂಠಿತಗೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಶ್ರೀ ಎಂ.ಪಿ. ಪ್ರಕಾಶ್(ಗ್ರಾಮೀಣ ಅಭಿವೃದ್ಧಿ ಮತ್ತು ಪಂ.ರಾಜ್ ಸಚಿವರು)

(ಅ) ಜಿಲ್ಲಾ ಪಂಚಾಯತ್ ಅಧಿನಿಯಮದ 1993ರ ಪ್ರಕರಣ 206ರ ಪ್ರಕಾರ ಪ್ರತಿಯೊಂದು ಗ್ರಾಮ ಪಂಚಾಯತಿಗೆ ವಾರ್ಷಿಕವಾಗಿ ಅನುದಾನ ರೂ. 1.00 ಲಕ್ಷ ರೂಪಾಯಿ ನೀಡಲಾಗುತ್ತದೆ. ಇದಲ್ಲದೆ ಜವಾಹರ್ ರೋಜ್‌ಗಾರ್ ಯೋಜನೆಯ ಶೇ.89ರಡಿಯಲ್ಲಿ ಗ್ರಾಮ ಪಂಚಾಯತಿಗಳಿಗೆ ಅನುದಾನ ಒದಗಿಸಲಾಗುತ್ತಿದೆ.

(ಆ) ರೂ. 1.00 ಲಕ್ಷ ಅನುದಾನವನ್ನು 4 ತ್ರೈಮಾಸಿಕ ಕಂತುಗಳಲ್ಲಿ ಬಿಡುಗಡೆ ಮಾಡಲಾಗುತ್ತದೆ. ಶೇ.80 ಜೆ.ಆರ್.ವೈ ಅನುದಾನವನ್ನು ಒಂದು ಹಣಕಾಸು ವರ್ಷದಲ್ಲಿ ಎರಡು ಕಂತುಗಳಲ್ಲಿ ಬಿಡುಗಡೆ ಮಾಡಲಾಗುತ್ತದೆ.

(ಇ) ಪ್ರತಿ ಗ್ರಾಮ ಪಂಚಾಯತಿಗೆ ರೂ.75,000ಗಳನ್ನು ಮೂರು ಕಂತುಗಳಲ್ಲಿ ಬಿಡುಗಡೆ ಮಾಡಲಾಗಿದೆ. ತೀರ್ಥಹಳ್ಳಿ ತಾಲ್ಲೂಕಿನ 38 ಗ್ರಾಮ ಪಂಚಾಯತಿಗಳಿಗೆ ಒಟ್ಟು ರೂ.28.50 ಲಕ್ಷಗಳನ್ನು ಬಿಡುಗಡೆ ಮಾಡಲಾಗಿದೆ. ಅದಲ್ಲದೆ ಜವಾಹರ್ ರೋಜ್‌ಗಾರ್ ಯೋಜನೆ 80 ಶೇ ಅಡಿಯಲ್ಲಿ ಈವರೆಗೆ ರೂ. 18.60 ಲಕ್ಷಗಳನ್ನು ಬಿಡುಗಡೆ ಮಾಡಲಾಗಿದೆ.

(ಈ) ಇಲ್ಲ.

ಪ್ರಥಮ ದರ್ಜೆ ಮಹಾವಿದ್ಯಾಲಯಗಳ ಮಂಜುರಾತಿ.

308 (707) ಶ್ರೀ ಅಶ್ವತ್‌ನಾರಾಯಣ ರೆಡ್ಡಿ (ವರ್ತೂರು):

ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

(ಅ) ಉನ್ನತ ಶಿಕ್ಷಣ ಇಲಾಖೆಯಿಂದ 1-1-95 ರಿಂದ 31-12-96 ರವರೆಗೆ ಸರ್ಕಾರದಿಂದ ಎಷ್ಟು ಮೊದಲನೆ ದರ್ಜೆ ಮಹಾವಿದ್ಯಾಲಯಗಳನ್ನು ಮಂಜೂರು ಮಾಡಲಾಗಿರುತ್ತದೆ; ಯಾವ ಯಾವ ಸ್ಥಳಗಳಲ್ಲಿ , (ವಿವರ ನೀಡುವುದು);

(ಅ) ಮೇಲ್ಕಂಡ ಎರಡು ವರ್ಷಗಳಲ್ಲಿ ಎಷ್ಟು ಖಾಸಗೀ ಸಂಸ್ಥೆಗಳಿಗೆ ಕಲೆ, ವಾಣಿಜ್ಯ, ವಿಜ್ಞಾನ, ತಾಂತ್ರಿಕ ಮಹಾವಿದ್ಯಾಲಯಗಳನ್ನು ಪ್ರಾರಂಭಿಸಲು ಅನುಮತಿ ನೀಡಲಾಗಿರುತ್ತದೆ, ಯಾವ ಯಾವ ಸ್ಥಳಗಳಲ್ಲಿ ಯಾವ ಯಾವ ಸಂಸ್ಥೆಗಳಿಗೆ ಅನುಮತಿ ನೀಡಲಾಗಿರುತ್ತದೆ;

(ಇ) ವರ್ತೂರು ಹೋಬಳಿ ಕೇಂದ್ರದಲ್ಲಿ ಪ್ರಥಮ ದರ್ಜೆ ಮಹಾವಿದ್ಯಾಲಯವನ್ನು ಮಂಜೂರು ಮಾಡಲು ಸರ್ಕಾರವು ಕ್ರಮ ಕೈಗೊಂಡಿರುತ್ತದೆಯೇ?

**ಶ್ರೀ ಬಿ. ಸೋಮಶೇಖರ್(ಉನ್ನತ ಶಿಕ್ಷಣ ಸಚಿವರು).**

(ಅ) 10 ಸರ್ಕಾರಿ ಕಾಲೇಜುಗಳು.

(ವಿವರಗಳು 1ನೇ ಅನುಬಂಧದಲ್ಲಿದೆ).

(ಆ) 66.

(ವಿವರಗಳು 2ನೇ ಅನುಬಂಧದಲ್ಲಿದೆ).

(ಇ) ಇಲ್ಲ.

ಅನುಬಂಧ-1

1995-96ನೇ ಶೈಕ್ಷಣಿಕ ವರ್ಷ

| | |
|---|---|
| 1) ಸರ್ಕಾರಿ ಕಾಲೇಜು, ಐನಾಪುರ | ಬಿ.ಎ. ಮತ್ತು ಬಿ.ಕಾಂ |

1996-97ನೇ ಶೈಕ್ಷಣಿಕ ವರ್ಷ

| | |
|---|---|
| 2) ಸರ್ಕಾರಿ ಕಾಲೇಜು, ಹೆಸರುಘಟ್ಟ | -ಬಿ.ಎ. |
| 3) ಸರ್ಕಾರಿ ಕಾಲೇಜು, ಗುಡಿಬಂಡಿ | -ಬಿ.ಎ. |
| 4) ಸರ್ಕಾರಿ ಕಾಲೇಜು, ಕುವೆಂಪು ನಗರ ಮೈಸೂರು | -ಬಿ.ಎ.,ಬಿ.ಎಸ್ಸಿ, ಬಿ.ಕಾಂ. |
| 5) ಸರ್ಕಾರಿ ಕಾಲೇಜು, ಮಳವಳ್ಳಿ | -ಬಿ.ಎಸ್ಸಿ. |
| 6) ಸರ್ಕಾರಿ ಕಾಲೇಜು, ಚಿನ್ನರಾಯಪಟ್ಟಣ | -ಬಿ.ಎ. |
| 7) ಸರ್ಕಾರಿ ಕಾಲೇಜು, ಬನ್ನೂರು | -ಬಿ.ಎ. |
| 8) ಸರ್ಕಾರಿ ಕಾಲೇಜು, ಪರಶುರಾಮಪುರ | -ಬಿ.ಎ. |
| 9) ಸರ್ಕಾರಿ ಕಾಲೇಜು, ಕುಕ್ಕನೂರು | -ಬಿ.ಎಸ್ಸಿ, ಬಿ.ಕಾಂ. |
| 10) ಸರ್ಕಾರಿ ಕಾಲೇಜು, ಬೈಲಹೊಂಗಲ | -ಬಿ.ಎ. |

ಅನುಬಂಧ-2

ಇಂಜನೀಯರಿಂಗ್ ಕಾಲೇಜು:- 1996-97

1) ಎಸ್.ಎಸ್.ಜೆ.ಪಿ.ಎಸ್.ಎನ್.ಎಂ. ರೂರಲ್ (1) ಮೆಕ್ಯಾನಿಕಲ್
ಇಂಜಿನೀಯರಿಂಗ್ ಕಾಲೇಜು, ನಿಡುಸೋಸಿ (2) ಎಲೆಕ್ಟ್ರಿಕಲ್ ಮತ್ತು ಎಲೆಕ್ಟ್ರಾನಿಕ್ಸ್
ಹುಕ್ಕೇರಿ ತಾ, ಬೆಳಗಾಂ ಜಿಲ್ಲೆ. (3) ಎಲೆಕ್ಟ್ರಾನಿಕ್ಸ್ ಮತ್ತು ಕಮ್ಯೂನಿಕೇಶನ್
(4) ಕಂಪ್ಯೂಟರ್ ಸೈನ್ಸ್

**1995-96ನೇ ಸಾಲಿನಲ್ಲಿ ಮಂಜೂರಾದ ಖಾಸಗಿ ಮಹಾವಿದ್ಯಾಲಯಗಳ ಪಟ್ಟಿ:**

1) ಬೆಂಗಳೂರು ಜಿಲ್ಲೆ:

2) ಕರ್ನಾಟಕ ಯೋಗಿ ನಾರಾಯಣ ಬಲಿಜ ಶಿಕ್ಷಣ ಮತ್ತು ಸಾಂಸ್ಕೃತಿಕ ಸಂಸ್ಥೆರವರ ಪ್ರಥಮ ದರ್ಜೆ ಮಹಾವಿದ್ಯಾಲಯ, ತಿಮ್ಮಯ್ಯ ಬಲಿಜ ಹಾಸ್ಟೆಲ್ ಕಟ್ಟಡ ಮೊದಲನೆಯ ಮುಖ್ಯ ರಸ್ತೆ, ಚಾಮರಾಜಪೇಟೆ, ಬೆಂಗಳೂರು-18. ಬಿ.ಕಾಂ.

3) ರಾಜೇಂದ್ರ ಶಿಕ್ಷಣ ಸಂಸ್ಥೆರವರ ಪ್ರಥಮ ದರ್ಜೆ ಮಹಾ ವಿದ್ಯಾಲಯ, ನಂ.5, ಸುಂಕದಕಟ್ಟೆ ಮಾಗಡಿ ಮುಖ್ಯ ರಸ್ತೆ, ಬೆಂಗಳೂರು- 560091. ಬಿ.ಎಸ್ಸಿ, ಬಿ.ಕಾಂ.

4) ಜಿ.ಡಿ.ವಿ. ಫೌಂಡೇಶನ್‌ರವರ ಪ್ರಥಮ ದರ್ಜೆ ಮಹಾ ವಿದ್ಯಾಲಯ, 303 ಎ ವಿಂಗ್, ಕ್ವೀನ್ಸ್ ಕಾರ್ನರ್ ಅಪಾರ್ಟ್‌ಮೆಂಟ್ಸ್, ನಂ.3, ಕ್ವೀನ್ಸ್ ರಸ್ತೆ, ಬೆಂಗಳೂರು-560001. ಕಲೆ, ಬಿ.ಎಸ್ಸಿ, ವಾಣಿಜ್ಯ, ಬಿ.ಎಂ.

5) ಆದರ್ಶ ವಿದ್ಯಾ ಸಂಘದವರ ಪ್ರಥಮ ದರ್ಜೆ ಮಹಾ ವಿದ್ಯಾಲಯ, ಚಾಮರಾಜಪೇಟೆ, ಬೆಂಗಳೂರು. ಬಿ.ಕಾಂ.

6) ಡಿ.ಕೆ.ಎಂ. ವಿದ್ಯಾಸಂಸ್ಥೆಯವರ ಪ್ರಥಮ ದರ್ಜೆ ಮಹಾ ವಿದ್ಯಾಲಯ, ಜರಗನಹಳ್ಳಿ ಎ.ಕೆ.ಎಂ ಬಡಾವಣೆ, ಬೆಂಗಳೂರು-560078. ಬಿ.ಎ. ಬಿ.ಎಸ್ಸಿ. ಬಿ.ಕಾಂ., ಬಿ.ಎಂ.

7) ಶ್ರೀ ಕೃಷ್ಣರಾಜೇಂದ್ರ ಚಾರಿಟಬಲ್ ಟ್ರಸ್ಟ್‌ರವರ ಪ್ರಥಮ ದರ್ಜೆ ಮಹಾವಿದ್ಯಾಲಯ, ವಿದ್ಯಾರಣ್ಯಪುರ, ಬೆಂಗಳೂರು. ಬಿ.ಎಫ್.ಎ.

| | |
|---|---|
| 8) ವಾಸವಿ ಶಿಕ್ಷಣ ಟ್ರಸ್ಟ್‌ರವರ ಪ್ರಥಮ ದರ್ಜೆ ಮಹಾ ವಿದ್ಯಾಲಯ, 14ನೇ ಮುಖ್ಯ ರಸ್ತೆ, 2ನೇ ಹಂತ, ಜೆ.ಪಿ.ನಗರ, ಬೆಂಗಳೂರು-78. | ಬಿ.ಎಸ್ಸಿ, ಬಿ.ಕಾಂ. |
| 9) ಶ್ರೀ ರೇವಣ್ಣ ಸಿದ್ದೇಶ್ವರ ಶಿಕ್ಷಣ ಟ್ರಸ್ಟ್‌ರವರ ಮಹಿಳಾ ಪ್ರಥಮ ದರ್ಜೆ ಮಹಾವಿದ್ಯಾಲಯ, ಆನಂದನಗರ, ಬೆಂಗಳೂರು. | ಬಿ.ಎ. ಮತ್ತು ಬಿ.ಎಸ್ಸಿ |
| 10) ಶ್ರೀ ಪ್ರಗತಿ ಶಿಕ್ಷಣ ಸಂಸ್ಥೆಯವರ ಪ್ರಥಮ ದರ್ಜೆ ಮಹಾವಿದ್ಯಾಲಯ, ಚೌಡಯ್ಯ ಬ್ಲಾಕ್, ಆರ್.ಟಿ. ನಗರ, ಬೆಂಗಳೂರು-560032. | ಬಿ.ಎಸ್ಸಿ. |
| 11) ರಾಜಾಜಿನಗರ ಶಿಕ್ಷಣ ಸಂಸ್ಥೆ ನಂ.6 ಸಿ 5ನೇ ಮುಖ್ಯ ರಸ್ತೆ, 2ನೇ ಹಂತ ಡಾ:ಮೋದಿ ಆಸ್ಪತ್ರೆ ಹಿಂಭಾಗ, ಮಹಾಲಕ್ಷ್ಮಿಪುರಂ, ಬೆಂಗಳೂರು.85. | ಬಿ.ಎಸ್ಸಿ ಮತ್ತು ಬಿ.ಕಾಂ. |
| ತುಮಕೂರು ಜಿಲ್ಲೆ: | |
| 12) ಶ್ರೀ ವಿದ್ಯೋದಯ ಫೌಂಡೇಶನ್‌ರವರ ಪ್ರಥಮ ಮಹಾವಿದ್ಯಾಲಯ, ತುಮಕೂರು-572102. | ಬಿ.ಬಿ.ಎಂ. |
| 13) ಬಾಪೂಜೀ ವಿದ್ಯಾಸಂಸ್ಥೆಯವರ ಪ್ರಥಮ ದರ್ಜೆ ಮಹಾವಿದ್ಯಾಲಯ, ಹೊರಪೇಟೆ, ತುಮಕೂರು -572101. | ಬಿ.ಎಫ್.ಎ. |
| 14) ನಿಟ್ಟೂರು ಸಿದ್ದ ಶ್ರೀ ವಿದ್ಯಾಸಂಸ್ಥೆಯವರ ಪ್ರಥಮ ದರ್ಜೆ ಮಹಾವಿದ್ಯಾಲಯ, ನಿಟ್ಟೂರು, ಗುಬ್ಬಿ ತಾಲ್ಲೂಕು- 572223. | ಬಿ.ಎ. |
| 15) ಕರಬಸವೇಶ್ವರ ವಿದ್ಯಾಸಂಸ್ಥೆ, ಸಿದ್ದಾಪುರ, ಕೋನೆಹಳ್ಳಿ. | ಬಿ.ಎ. |
| ಕೋಲಾರ ಜಿಲ್ಲೆ: | |
| 16) ಬೆಂಗಳೂರಿನ ಸೌತ್ ಇಂಡಿಯಾ ರೀಜನಲ್ ಕಾನ್‌ಫರೆನ್ಸ್ ಆಫ್ ಮೆಡಾಡಿಸ್ಟ್ ಚರ್ಚ್ ಇನ್ ಇಂಡಿಯರವರ ಪ್ರಥಮ ದರ್ಜೆ ಮಹಿಳಾ ಮಹಾವಿದ್ಯಾಲಯ, ಕೋಲಾರ. | ಬಿ.ಎ. |

| | |
|---|---|
| ಮೈಸೂರು ಜಿಲ್ಲೆ: | |
| 17) ಮುಸ್ಲಿಂ ಶಿಕ್ಷಣ ಸಂಸ್ಥೆಯವರ ಪ್ರಥಮ ದರ್ಜೆ ಮಹಾವಿದ್ಯಾಲಯ, ತಿಲಕ್‌ನಗರ, ಮೈಸೂರು. | ಬಿ.ಎ. ಬಿ.ಕಾಂ. ಮತ್ತು ಬಿ.ಬಿ.ಎಂ. |
| 18) ವಿಶ್ವಶಾಂತಿ ಸಂಸ್ಥೆಯವರ ಪ್ರಥಮ ದರ್ಜೆ ಮಹಾವಿದ್ಯಾಲಯ, ಸಾಧನಪುರ, ಹುಣಸೂರು. | ಬಿ.ಎ. |
| ಮಂಗಳೂರು ಜಿಲ್ಲೆ: | |
| 19) ಬ್ರಹ್ಮಶ್ರೀ ನಾರಾಯಣ ಗುರುರವರ ಮಹಿಳಾ ಪ್ರಥಮ ದರ್ಜೆ ಮಹಾವಿದ್ಯಾಲಯ, ಕಾಟಿಪಳ್ಳ, ಮಂಗಳೂರು. | ಬಿ.ಎ. |
| ಧಾರವಾಡ ಜಿಲ್ಲೆ: | |
| 20) ಅಂಜುಮನ್-ಎ-ಇಸ್ಲಾಂರವರ ಮಹಿಳಾ ಪ್ರಥಮ ದರ್ಜೆ ಮಹಾವಿದ್ಯಾಲಯ, ಸ್ಟೇಷನ್ ರಸ್ತೆ, ಹುಬ್ಬಳ್ಳಿ. | ಬಿ.ಎ. ಮತ್ತು ಬಿ.ಕಾಂ. |
| 21) ಕನ್ನಡ ಕಿರಣ ಸಮಿತಿಯವರ ಬಿ.ಎನ್.ಡಬ್ಲ್ಯೂ ಮಹಾವಿದ್ಯಾಲಯ, ಹುಬ್ಬಳ್ಳಿ. | ಬಿ.ಎಸ್.ಡಬ್ಲ್ಯೂ. |
| ಉತ್ತರ ಕನ್ನಡ ಜಿಲ್ಲೆ: | |
| 22) ಅಂಜುಮಾನ್ ಹಾಮಿ ಸುನ್ನಿಮಾನ್ ಸಂಸ್ಥೆಯವರ ಮಹಿಳಾ ಕಲಾ ಮಹಾವಿದ್ಯಾಲಯ, ಭಟ್ಕಳ. | ಬಿ.ಎ. |
| ರಾಯಚೂರು ಜಿಲ್ಲೆ: | |
| 23) ವಿದ್ಯಾನಂದ ಗುರುಕುಲ ಶಿಕ್ಷಣ ಟ್ರಸ್ಟ್‌ರವರ ಪ್ರಥಮ ದರ್ಜೆ ಮಹಾವಿದ್ಯಾಲಯ, ಕುಕನೂರು, ಯಲಬುರ್ಗಾ ತಾಲೂಕು. | ಬಿ.ಎ. |
| ಬಳ್ಳಾರಿ ಜಿಲ್ಲೆ: | |
| 24) ಉಜ್ಜಯನಿಯ ಶ್ರೀ ಜಗದ್ಗುರು ಉಜ್ಜಯಿನಿ ಸದ್ಧರ್ಮ ಸಿಂಹಾಸನ ಜ್ಞಾನಗುರು ವಿದ್ಯಾಪೀಠರವರ ಪ್ರಥಮ ದರ್ಜೆ ಮಹಾವಿದ್ಯಾಲಯ, ಉಜ್ಜಯನಿ, ಬಂಡಿಹೋಮ, ಬಳ್ಳಾರಿ. | ಬಿ.ಎ. |

25) ಮೈಸೂರು ಎಜುಕೇಶನ್ ಸೊಸೈಟಿರವರ ಪ್ರಥಮ ದರ್ಜೆ
ವಿದ್ಯಾಲಯ ಕೇರಾಫ್ ಸಾರ್ದಾಲ ಹಿರಿಯ ಮಹಾ ಬಿ.ಎಸ್ಸಿ.
ವಿದ್ಯಾಲಯ, ಕಳಮ್ಮರಸ್ತೆ, ಬಳ್ಳಾರಿ.

26) ಬಳ್ಳಾರಿಯ ತುಂಗಭದ್ರ ಶಿಕ್ಷಣ ಆರೋಗ್ಯ ಮತ್ತು
ಗ್ರಾಮೀಣ ಅಭಿವೃದ್ಧಿ ಟ್ರಸ್ಟ್‌ರವರ ಪ್ರಥಮ
ದರ್ಜೆ ಮಹಾವಿದ್ಯಾಲಯ, 3ನೇ ಕ್ರಾಸ್, ಬಿ.ಎಸ್ಸಿ.
ಗಾಂಧೀನಗರ, ಬಳ್ಳಾರಿ.

**1996-97ನೇ ಸಾಲಿನಲ್ಲಿ ಮಂಜೂರಾದ ಮಹಾವಿದ್ಯಾಲಯಗಳ ಪಟ್ಟಿ.**

ಬೆಂಗಳೂರು ನಗರ ಜಿಲ್ಲೆ:

27) ಬೆಂಗಳೂರು ಗಾಯತ್ರಿ ಎಜುಕೇಶನ್ ಸಂಘದ ಬಿ.ಬಿ.ಎಂ.
ಅನುಪಮ ಕಾಲೇಜು, ವೆಸ್ಟ್ ಆಫ್ ಕಾರ್ಡ್
ರಸ್ತೆ, 2ನೇ ಹಂತ ಅವಾನಿ ಶಂಕರ ಮಠದ
ಹತ್ತಿರ, ಮಹಾಲಕ್ಷ್ಮೀಪುರಂ, ಬೆಂಗಳೂರು-36.

28) ಶ್ರೀ ಆದಿ ಚುಂಚನಗಿರಿ ಶಿಕ್ಷಣ ಟ್ರಸ್ಟ್‌ನ ಶ್ರೀ ಆದಿ
ಚುಂಚನಗಿರಿ ಬಿಸಿನೆಸ್ ಮ್ಯಾನೇಜ್‌ಮೆಂಟ್ ಬಿ.ಬಿ.ಎಂ.
ಮಹಾವಿದ್ಯಾಲಯ, ವಿಜಯನಗರ, ಬೆಂಗಳೂರು.

29) ಕರ್ನಾಟಕ ಯಾದವ ಎಜುಕೇಶನ್ ಸೊಸೈಟಿಯವರ
ಮಹಿಳಾ ಮಹಾವಿದ್ಯಾಲಯ, ಮಾಧವನಗರ, ಬಿ.ಕಾಂ.
ಬೆಂಗಳೂರು-560001.

30) ಸರಸ್ವತಿ ಎಜುಕೇಶನ್ ಸೊಸೈಟಿಯ ಈಸ್ಟ್ ವೆಸ್ಟ್
ಬಿಸಿನೆಸ್ ಮ್ಯಾನೇಜ್‌ಮೆಂಟ್ ಮಹಾವಿದ್ಯಾಲಯ, ಬಿ.ಬಿ.ಎಂ.
ಮಾರುತಿ ಎಕ್ಸ್‌ಟೆನ್‌ಷನ್, 2ನೇ ಹಂತ,
ರಾಜಾಜಿನಗರ, ಬೆಂಗಳೂರು.

31) ಕ್ರಿಶ್ಚಿಯನ್ ಸೊಸೈಟಿ ಫಾರ್ ಪ್ರೋಮೋಟಿಂಗ್
ಲೀಗಲ್ ಪ್ರೊಫೆಷನಲ್ ಅಂಡ್ ಹೈಯರ್ ಬಿ.ಎಸ್ಸಿ.
ಎಜುಕೇಷನ್ ಮಹಾತ್ಮಗಾಂಧಿ ವಿಜ್ಞಾನ
ಮಹಾವಿದ್ಯಾಲಯ, ಗೆದ್ದಲಹಳ್ಳಿ, ಬೆಂಗಳೂರು.

ಬೆಂಗಳೂರು ಗ್ರಾಮಾಂತರ ಜಿಲ್ಲೆ:

| | |
|---|---|
| 32) ದೇವನಹಳ್ಳಿಯ ರೂರಲ್ ಎಜುಕೇಷನ್ ಟ್ರಸ್ಟ್‌ರವರ ರಾಯಲ್ ಬಿಸಿನೆಸ್ ಮ್ಯಾನೇಜ್‌ಮೆಂಟ್ ಮಹಾವಿದ್ಯಾಲಯ, ಡಿ.ಎಸ್. ರಸ್ತೆ, ದೇವನಹಳ್ಳಿ-562110. | ಬಿ.ಬಿ.ಎಂ. |
| 33) ಬೆಂಗಳೂರು ಆಲ್-ಅಮೀನ್ ಎಜುಕೇಷನ್ ಸಂಘದ ಆಲ್ ಅಮೀನ್ ಆಲಹಾಬಾದ್ ಮಹಾವಿದ್ಯಾಲಯ, ಚನ್ನಪಟ್ಟಣ. | ಬಿ.ಎ. |
| ಮೈಸೂರು ಜಿಲ್ಲೆ. | |
| 34) ಟಿ.ಟಿ.ಎಲ್. ವಿದ್ಯಾಸಂಸ್ಥೆಯ ಟಿ.ಟಿ.ಎಲ್. ಮಹಾವಿದ್ಯಾಲಯ, ನಂ.2899:2, 1ನೇ ಮುಖ್ಯ ರಸ್ತೆ, ಸರಸ್ವತಿಪುರಂ, ಮೈಸೂರು. | ಬಿ.ಬಿ.ಎಂ. |
| 35) ಬೆಂಗಳೂರಿನ ಪರಮಹಂಸ ಫೌಂಡೇಷನ್ ಟ್ರಸ್ಟ್‌ನವರ ಅಡ್‌ಮಿನಿಸ್ಟ್ರೇಷನ್ ಮ್ಯಾನೇಜ್‌ಮೆಂಟ್ ಮಹಾವಿದ್ಯಾಲಯ, ಮೈಸೂರು. | ಬಿ.ಎಸ್ಸಿ. ಮತ್ತು ಬಿ.ಬಿ.ಎಂ. |
| 36) ಮಲ್ಲಮ್ಮ-ಮರಿಮಲ್ಲಪ್ಪ ವಿಜ್ಞಾನ ಮತ್ತು ಬಿಬಿಎಂ. ಮಹಾವಿದ್ಯಾಲಯ, ರಾಮವಿಲಾಸ್ ರಸ್ತೆ, ಮೈಸೂರು. | ಬಿ.ಎಸ್ಸಿ ಮತ್ತು ಬಿ.ಬಿ.ಎಂ. |
| ಮಂಗಳೂರು ಜಿಲ್ಲೆ. | |
| 37) ದಕ್ಷಿಣ ಕನ್ನಡ ಗೌಡ ವಿದ್ಯಾ ಸಂಘದ ಶ್ರೀ ಶಾರದ ಮಹಿಳಾ ಮಹಾವಿದ್ಯಾಲಯ, ಸೂಳ್ಯ. | ಬಿ.ಎ. |
| ಕೊಡಗು ಜಿಲ್ಲೆ: | |
| 38) ಸೂಳ್ಯ ಅಕಾಡೆಮಿ ಆಫ್ ಲಿಬರಲ್ ಎಜುಕೇಷನ್ ಸಂಘದ ಮಹಾವಿದ್ಯಾಲಯ, ಭಾಗಮಂಡಲ, ಮಡಿಕೇರಿ ಜಿಲ್ಲೆ. | ಬಿ.ಎ. |
| 39) ಶನಿವಾರ ಸಂತೆ ವಿದ್ಯಾಸಂಸ್ಥೆಯವರ ಪ್ರಥಮ ದರ್ಜೆ ಮಹಾವಿದ್ಯಾಲಯ, ಶನಿವಾರಸಂತೆ, ಕೊಡಗು ತಾಲೂಕು. | ಬಿ.ಎ ಮತ್ತು ಬಿ.ಕಾಂ. |

ಧಾರವಾಡ ಜಿಲ್ಲೆ.

40) ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಶಿಕ್ಷಣ ಸಂಸ್ಥೆ, ಉಜಿರೆಯವರ ಜೆ.ಎಸ್.ಎಸ್. ಬನಶಂಕರಿ ಕಲಾ ಮತ್ತು ಎಸ್.ಕೆ. ಗುಬ್ಬಿ ವಿಜ್ಞಾನ ಮಹಾವಿದ್ಯಾಲಯ, ಧಾರವಾಡ. — ಬಿ.ಬಿ.ಎ.

41) ಶ್ರೀ ಜಗದ್ಗುರು ಮೂರು ಸಾವಿರ ಮಠದ ವಿದ್ಯಾವರ್ಧಕ ಸಂಘದ ಬಿಬಿಎ ಮಹಾವಿದ್ಯಾಲಯ, ಹುಬ್ಬಳ್ಳಿ. — ಬಿ.ಬಿ.ಎ.

42) ಶ್ರೀ ಮಹಾರಾಣಿ ಪ್ರತಾಪಸಿಂಗ್ ಎಜುಕೇಷನ್ ಸೊಸೈಟಿಯವರ ಪ್ರಥಮದರ್ಜೆ ಮಹಾವಿದ್ಯಾಲಯ, ಬೆಟಗೇರಿ. — ಬಿ.ಎ.

43) ಬೆಂಗಳೂರಿನ ಖರಷಿ ಸಂಸ್ಕೃತಿ ವಿದ್ಯಾಕೇಂದ್ರ ಟ್ರಸ್ಟ್‌ನ ಇಂಡಿಯನ್ ಇನ್ಸ್‌ಟಿಟ್ಯೂಟ್ ಆಫ್ ಇನ್ಸ್‌ಟಲೇಷನ್ಸ್ ಲೀಡರ್‌ಶಿಪ್‌ರವರ ಪ್ರಥಮ ದರ್ಜೆ ಮಹಾವಿದ್ಯಾಲಯ, ಸರಿಗೂರು, ಹಾವೇರಿ ತಾಲೂಕು. — ಬಿ.ಎ.

44) ಅಂಜುಮನ್-ಎ-ಇಸ್ಲಾಂ ಸಂಸ್ಥೆಯ ಬ್ಯಾಚುರಲ್ ಆಫ್ ಅಡ್‌ಮಿನಿಸ್ಟ್ರೇಷನ್ ಮಹಾವಿದ್ಯಾಲಯ, ಧಾರವಾಡ. — ಬಿ.ಬಿ.ಎಂ.

45) ಕೆ.ಎಲ್.ಇ. ಸಂಸ್ಥೆ ಬೆಳಗಾಂ ರವರ ಜೆ.ಜೆ.ವಾಣಿಜ್ಯ ಮಹಾವಿದ್ಯಾಲಯ, ಹುಬ್ಬಳ್ಳಿ. — ಬಿ.ಬಿ.ಎಂ.

ಬೆಳಗಾಂ ಜಿಲ್ಲೆ:

46) ಜೆ.ಎಸ್.ಎಸ್. ಶಿಕ್ಷಣ ಸಂಸ್ಥೆ ಬೆಳಗಾಂರವರ ಭರತೇಶ ಬಿಸಿನೆಸ್ ಅಡ್‌ಮಿನಿಸ್ಟ್ರೇಷನ್ ಮಹಾವಿದ್ಯಾಲಯ, ಬೆಳಗಾಂ. — ಬಿ.ಬಿ.ಎಂ.

47) ದಿ ಬೆಳಗಾಂ ಜನತಾ ಶಿಕ್ಷಣ ಸಮಿತಿಯವರ ಬಿಬಿಎ ಮಹಾವಿದ್ಯಾಲಯ, ಬೆಳಗಾಂ ರಸ್ತೆ, ಬೆಳಗಾಂ. — ಬಿ.ಬಿ.ಎ.

48) ಕೆ.ಎಲ್.ಇ. ಸಂಸ್ಥೆ ಬೆಳಗಾಂ ರವರ ಲಿಂಗರಾಜ ಮಹಾವಿದ್ಯಾಲಯ, ಬೆಳಗಾಂ. — ಬಿ.ಬಿ.ಎ.

49) ಕೆ.ಎಲ್.ಇ. ಸಂಸ್ಥೆ ಬೆಳಗಾಂರವರ ಗೋಗಟೆ
ವಾಣಿಜ್ಯ ಮಹಾವಿದ್ಯಾಲಯ, ಬೆಳಗಾಂ. ಬಿ.ಬಿ.ಎ.

50) ಲಕ್ಷ್ಮಿ ಎಜುಕೇಷನ್ ಟ್ರಸ್ಟ್‌ರವರ ಬಿ.ಬಿ.ಎ.
ಮಹಾವಿದ್ಯಾಲಯ, ಗೋಕಾಕ್. ಬಿ.ಬಿ.ಎ.

51) ವಿದ್ಯವರ್ಧಕ ಮಂಡಳದ ಪದವಿ ಮಹಾವಿದ್ಯಾಲಯ,
ನಿಪ್ಪಾಣಿ. ಬಿ.ಬಿ.ಎ.

52) ಸಂಕೇಶ್ವರ ಶ್ರೀ ದುರುದುಂಡೀಶ್ವರ ವಿದ್ಯಾವರ್ಧಕ
ಸಂಘದ ಬಿ.ಬಿ.ಎಂ. ಮಹಾವಿದ್ಯಾಲಯ, ಬಿ.ಬಿ.ಎ.
ಸಂಕೇಶ್ವರ, ಬೆಳಗಾಂ ಜಿಲ್ಲೆ.

ಉತ್ತರ ಕನ್ನಡ ಜಿಲ್ಲೆ:

53) ಎಂ.ಪಿ.ಇ. ಸೊಸೈಟಿ ಹೊನ್ನಾವರ ರವರ
ಎಸ್.ಡಿ.ಎಂ. ಮಹಾವಿದ್ಯಾಲಯ, ಬಿ.ಬಿ.ಎ.
ಹೊನ್ನಾವರ.

ಬಿಜಾಪುರ ಜಿಲ್ಲೆ:

54) ಬಿ.ಎಲ್.ಡಿ.ಇ. ಸಂಸ್ಥೆಯ ಪ್ರಥಮ ದರ್ಜೆ
ಮಹಾವಿದ್ಯಾಲಯ, ತಿರೋಟಾ, ಬಿಜಾಪುರ. ಬಿ.ಎ.

55) ಬಿ.ಎಲ್.ಡಿ.ಇ. ಸಂಸ್ಥೆ, ಬಿಜಾಪುರರವರ
ಎ.ಎಸ್.ಪಿ. ವಾಣಿಜ್ಯ ಮಹಾವಿದ್ಯಾಲಯ, ಬಿ.ಬಿ.ಎ.
ಬಿಜಾಪುರ.

56) ಶ್ರೀ ಕಾಳಿದಾಸ ಶಿಕ್ಷಣ ಸಂಸ್ಥೆಯ ಬಿಎಸ್‌ಡಬ್ಲ್ಯೂ
ಮಹಾವಿದ್ಯಾಲಯ, ಬಾದಾಮಿ. ಬಿಎಸ್‌ಡಬ್ಲ್ಯೂ

57) ಶ್ರೀ ಕಾಳಿದಾಸ ಶಿಕ್ಷಣ ಸಂಸ್ಥೆಯ ಕಲಾ ಮಹಾ-
ವಿದ್ಯಾಲಯ, ಕರೂರು, ಬಾದಾಮಿ ತಾಲೂಕು. ಬಿ.ಎ.

58) ಬಸವೇಶ್ವರ ವಿದ್ಯಾವರ್ಧಕ ಸಂಘ ಬಾಗಲಕೋಟೆ-
ಯವರ ಬಸವೇಶ್ವರ ವಾಣಿಜ್ಯ ಮಹಾವಿದ್ಯಾಲಯ,
ಬಾಗಲಕೋಟೆ. ಬಿ.ಬಿ.ಎ.

ಗುಲ್ಬರ್ಗ ಜಿಲ್ಲೆ:

| | |
|---|---|
| 59) ಗುಲ್ಬರ್ಗಾದ ಬಂಜಾರ ಶಿಕ್ಷಣ ಸಂಸ್ಥೆಯವರ ಪದವಿ ಮಹಾವಿದ್ಯಾಲಯ, ವಾಡಿ, ಸೇಡಂ ತಾಲೂಕು. | ಬಿ.ಎ. |
| 60) ಶ್ರೀ ಮಹಂತೇಶ್ವರ ವಿದ್ಯಾವರ್ಧಕ ಸಂಘದ ಪ್ರಥಮ ದರ್ಜೆ ಮಹಾವಿದ್ಯಾಲಯ, ಅಫ್‌ಜಲಪುರ. | ಬಿ.ಎ. ಮತ್ತು ಬಿ.ಎಸ್ಸಿ. |
| 61) ಶ್ರೀ ಹರ ಬಸವೇಶ್ವರ ವಿದ್ಯಾವರ್ಧಕ ಸಂಘದ ಬಾಮಗೌಡ ದರ್ಶನಾಪುರರವರ ಮಹಿಳಾ ಕಲಾ ಮಹಾವಿದ್ಯಾಲಯ, ಶಹಪುರ. | ಬಿ.ಎ. |

ರಾಯಚೂರು ಜಿಲ್ಲೆ:

| | |
|---|---|
| 62) ಅಕಾಡಮಿ ಆಫ್ ಮೆಡಿಕಲ್ ಎಜುಕೇಷನ್ ರವರ ಪ್ರಥಮ ದರ್ಜೆ ಮಹಾವಿದ್ಯಾಲಯ, ರಾಯಚೂರು. | ಬಿ.ಎಸ್ಸಿ. |

ಬೀದರ್ ಜಿಲ್ಲೆ:

| | |
|---|---|
| 63) ಶ್ರೀ ಡಿ. ದೇವರಾಜ್ ಅರಸ್ ಶಿಕ್ಷಣ ಟ್ರಸ್ಟ್‌ನ ಮಹಾವಿದ್ಯಾಲಯ ನಂ. 174, ಎಲ್.ಪಿ.ಬಿ., ಕೆ.ಹೆಚ್.ಬಿ. ಕಾಲೋನಿ, ಬೀದರ್. | ಬಿ.ಬಿ.ಎಂ. |
| 64) ಕಲ್ಯಾಣ ಕರ್ನಾಟಕ ಶಿಕ್ಷಣ ಟ್ರಸ್ಟಿನ ಮಹಾವಿದ್ಯಾಲಯ, ಬೀದರ್. | ಬಿ.ಬಿ.ಎಂ. |
| 65) ಕರ್ನಾಟಕ ರಾಷ್ಟ್ರೀಯ ಶಿಕ್ಷಣ ಸಂಸ್ಥೆಯ ಮಹಾ-ವಿದ್ಯಾಲಯ, ಬೀದರ್. | ಬಿ.ಎಸ್ಸಿ. |
| 66) ದೀಕ್ಷಾಭೂಮಿ ಶಿಕ್ಷಣ ಸಂಸ್ಥೆಯವರ ಪ್ರಥಮ ದರ್ಜೆ ಮಹಾವಿದ್ಯಾಲಯ, ಹುಮ್ನಾಬಾದ್. | ಬಿ.ಎ. |

ರಾಜ್ಯದಲ್ಲಿ ಸಾರ್ವಜನಿಕ ಗ್ರಂಥಾಲಯಗಳು.

**310 (706) ಶ್ರೀ ಅಶ್ವತ್ಥ್‌ನಾರಾಯಣ ರೆಡ್ಡಿ (ವರ್ತೂರು):**

ಮಾನ್ಯ ವಯಸ್ಕರ ಶಿಕ್ಷಣ ಮತ್ತು ಗ್ರಂಥಾಲಯ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?